ANNEXURE TO UNSTARRED L.A. QUESTION NO. 240 BY SRI K. GEORGE M.L.A.

Statement showing the names of Distilleries awarded with Arrack bottling licences.

Sl No.	Name of the Distillery	District allotted
1	M/S. Ravindra and Co., Bidar	Gulbarga and Bidar
2	M/S Pampasara Distillery (P) Ltd., Hospet	Bellary
3	M/S Sapthageti Enterprises Sameerwadi, Bijapur	Dharwad and D.K. District
4	M/S Gamini Distilleries Ltd., Bangalore.	Mysore and Kodagu
5	M/S BT and FC (P) Ltd., Bangalore	Tumkur
6	M/S Karnataka Brewary and Distillery (P) Ltd., Bangalore	Bangalore Urban Bangalore Rural and Kolar
7	M/S H.S. S.K.N. Sankeshwar, Belgaum Dist	Belgaum
8	M/S Ugar Sugar Works Ltd., Ugar Khurd, Belgaum	Raichur
9	M/S Mysore Sugar C., Ltd.,	Mandya and Hassan.
10	M/S distilleries Co., (P) Ltd., Shimoga	Chitradurga, Chikkamagalore and Shimoga
11	M/S Malaprabha Co. op. Sugar Factory Ltd. N.K. Hubli, Belgaum	Bijapur, and Uttar Kannada District

ಕರ್ನಾಟಕದ ಲೋಕೋಪಯೋಗಿ ಇಲಾಖೆಯಲ್ಲಿ ಉಪಯೋಗಿಸದೇ ಇರುವ ವಾಹನಗಳ ಸಂಖ್ಯೆ

೪೪೯. ಶ್ರೀ ಗೋಪಾಲ ಎಂ. ಕಾನಡೆ.— ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ಲೋಕೋಪಯೋಗಿ ಇಲಾಖೆಯಲ್ಲಿರುವ ವಾಹನಗಳ ಸಂಖ್ಯೆ ಎಷ್ಟು? ದುರಸ್ತಿಯಲ್ಲಿರುವ ವಾಹನಗಳ ಸಂಖ್ಯೆ ಎಷ್ಟು? ಹಾಗೂ ನಾ ದುರಸ್ತಿಯಲ್ಲಿರುವ ವಾಹನಗಳ ಸಂಖ್ಯೆ ಎಷ್ಟು?

ಆ) ಹಾಗಿದ್ದಲ್ಲಿ, ನಾದುರಸ್ತಿಯಲ್ಲಿರುವ ವಾಹನಗಳಿಂದಾಗುವ ನಷ್ಟವೆಷ್ಟು?

ಶ್ರೀ ಕೃಷ್ಣಾರೆಡ್ಡಿ (ಲೋಕೋಪಯೋಗಿ ಮಂತ್ರಿಗಳು).—

ಅ)

ಒಟ್ಟಿನ ವಾಹನಗಳ ಸಂಖ್ಯೆ	ಚಾಲು ಸ್ಥಿತಿಯಲ್ಲಿರುವ ವಾಹನಗಳ ಸಂಖ್ಯೆ	ದುರಸ್ತಿಯಲ್ಲಿರುವ ವಾಹಪಗಳ ಸಂಖ್ಯೆ	ನಾದುರಸ್ತಿಯಲ್ಲಿರುವ ವಾಹನಗಳ ಸಂಖ್ಯೆ
೭೨೬	೫೩೧	೧೨೦	೭೫

ಆ) ನ್ಯಾದಂರಸ್ತಿಯಾದ ವಾಹನಗಳನ್ನು ಮುಖ್ಯ ಇಂಜಿನಿಯರ್, ಕೇಂದ್ರ ಯಾಂತ್ರಿಕ ಸಂಸ್ಥೆ ಇವರು ಪರಿಶೀಲಿಸಿ, ಇವರ ಮಂತ್ರು ಸರಕಾರದ ಆದೇಶದ ಮೇರೆಗೆ ಹರಾಜು ಮಾಡಲಾಗುವುದು. ಹರಾಜು ಮಾಡಲಾದ ಹಣವು ಪುಸ್ತಕದ ಬೆಲೆಗಿಂತ ಕಡಿಮೆ ಆಗುವುದಿಲ್ಲವೆಂದೂ ಮತ್ತು ಯಾವ ಹಾನಿ ಯಾಗುವುದಿಲ್ಲವೆಂದೂ ಭಾವಿಸಲಾಗಿದೆ.

ಕರ್ನಾಟಕದಲ್ಲಿ ಐ.ಎ.ಎಸ್. ಅಧಿಕಾರಿಗಳ ಸಂಖ್ಯೆ

೪೫೪. ಗೋಪಾಲ್ ಎಂ. ಕಾನಡೆ.—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿರುವ ಐ.ಎ.ಎಸ್. ಐ.ಪಿ.ಎಸ್, ಅಧಿಕಾರಿಗಳ ಸಂಖ್ಯೆ ಎಷ್ಟು ? ಆ ಪೈಕಿ ಎಷ್ಟು ಅಧಿಕಾರಿಗಳ ಮೇಲೆ ಭ್ರಷ್ಟಾಚಾರ ಆಪಾದನೆಗಳಿವೆ ಹಾಗೂ ಶಿಕ್ಷೆಗೆ ಒಳಗಾಗಿರುವವರ ಸಂಖ್ಯೆ ಎಷ್ಟು ?

ಆ) ಭ್ರಷ್ಟಾಚಾರಕ್ಕೊಳಗಾಗಿರುವ ಅಧಿಕಾರಿಗಳ ಹೆಸರು ಹಾಗೂ ಕೈಗೊಂಡ ಕ್ರಮದ ವಿವರ ಒದಗಿಸುವುದು ?

ಶ್ರೀ ಎಸ್. ಆರ್. ಬೊಮ್ಮಾಯಿ (ಮುಖ್ಯ ಮಂತ್ರಿಗಳು),—

ಅ) ರಾಜ್ಯದಲ್ಲಿರುವ ಅಧಿಕಾರಿಗಳ ಸಂಖ್ಯೆ	ಐ.ಎ.ಎಸ್.	೨೪೨
	ಐ.ಪಿ.ಎಸ್.	೧೦೭
ಭ್ರಷ್ಟಾಚಾರದ ಆಪಾದನೆಗಳಿರುವ ಅಧಿಕಾರಿಗಳ ಸಂಖ್ಯೆ	ಐ.ಎ.ಎಸ್.	೩
	ಐ.ಪಿ.ಎಸ್.	ಇಲ್ಲ
ಶಿಕ್ಷೆಗೆ ಒಳಗಾಗಿರುವ ಅಧಿಕಾರಿಗಳ ಸಂಖ್ಯೆ	ಐ.ಎ.ಎಸ್.	ಇಲ್ಲ
	ಐ.ಪಿ.ಎಸ್.	ಇಲ್ಲ

ಆ) ಶ್ರೀ ಕೆ. ರಂಗಪ್ಪ, ವಿಚಾರಣಾ ಅಧಿಕಾರಿಯನ್ನು ನೇಮಿಸಲಾಗಿದೆ.
ಶ್ರೀ ಐ. ದೇವೆಂದ್ರಪ್ಪ, ತನಿಖೆಗಾಗಿ ಲೋಕಾಯುಕ್ತಕ್ಕೆ ಕಳುಹಿಸಲಾಗಿದೆ.

ಶ್ರೀ ಪಿ. ಜಿ. ನಾಯಕ್, ತನಿಖೆಗಾಗಿ ಲೋಕಾಯುಕ್ತಕ್ಕೆ ಕಳುಹಿಸಲಾಗಿತ್ತು. ವರದಿ ಬಂದು ಪರಿಶೀಲನೆಯಲ್ಲಿದೆ.

ಯೋಜನೇತರ ವೆಚ್ಚ ಕಡಿಮೆಗೊಳಿಸುವುದು

೩೫೧. **ಶ್ರೀ ಜ್ಞಾನದೇವ ದೊಡ್ಡ ಮೇಟಿ (ರೋಣ).**—ಮಾನ್ಯ ಮುಖ್ಯ ಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಸರ್ಕಾರವು ಯೋಜನೇತರ ವೆಚ್ಚಗಳನ್ನು ಕಡಿಮೆಗೊಳಿಸುವಲ್ಲಿ ಕೈಗೊಂಡ ಕ್ರಮಗಳು ಯಾವುವು ?

ಆ) ೧೯೮೬-೮೭, ೧೯೮೭-೮೮ ಮತ್ತು ೧೯೮೮-೮೯ ಸಾಲಿನಲ್ಲಿ ಪ್ರತಿವರ್ಷ ಪ್ರತಿ ಶತ ವೆಚ್ಚ ಕಡಿತ ಎಷ್ಟು ಆಗಿದೆ ? (ರಾಜ್ಯದ ವಿವಿಧ ಇಲಾಖಾವಾರು ಕಡಿತದ ಹಣ ನಮೂದಿಸುವುದು),

ಇ) ಯೋಜನೇತರ ವೆಚ್ಚ ಹೆಚ್ಚುತ್ತಿರುವುದರಿಂದ, ಯೋಜನೆಗಳ ಅನುಷ್ಠಾನಕ್ಕೆ ಆರ್ಥಿಕ ತೊಂದರೆಯು ಕಾಣಿಸುವುದಿಲ್ಲವೆ ?

ಈ) ಹಾಗಿದ್ದಲ್ಲಿ ಯೋಜನೆಗಳಿಗೆ ಆಗುತ್ತಿರುವ ತೊಂದರೆ ನಿವಾರಣೆಗೆ ಕೈಗೊಂಡ ಕ್ರಮಗಳೇನು

ಶ್ರೀ ಎಸ್. ಆರ್. ಬೊಮ್ಮಾಯಿ (ಮುಖ್ಯ ಮಂತ್ರಿ).—

ಅ) ಯೋಜನೇತರ ವೆಚ್ಚವನ್ನು ಕಡಿಮೆಗೊಳಿಸುವ ಸಲುವಾಗಿ ಸರ್ಕಾರವು ಕಾಲದಿಂದ ಕಾಲಕ್ಕೆ ಮಿತವ್ಯಯ ಕ್ರಮಗಳನ್ನು ಜಾರಿಗೊಳಿಸುತ್ತದೆ. ವಿವಿಧ ಬಾಬುಗಳ ಮೇಲಣ ಯೋಜನೇತರ ವೆಚ್ಚವನ್ನು ನಿರ್ಬಂಧಗೊಳಿಸುವ ಸಲುವಾಗಿ ಮಿತವ್ಯಯ ಆದೇಶಗಳನ್ನು ಹೊಸಡಿಸಲಾಗಿದೆ. ಶೂನ್ಯಧಾರಿತ ಆಯವ್ಯಯ ಕ್ರಮದಡಿಯಲ್ಲಿ ಕೈಬಿಡಬಹುದಾದ ಕಡಿಮೆ ಮಾಡಬಹುದಾದಂತಹ ನಿರ್ದಿಷ್ಟ ವೆಚ್ಚದ ಬಾಬುಗಳನ್ನು ಗುರುತಿಸುವ ಪ್ರಯತ್ನ ಮಾಡಲಾಗಿದೆ.